ರವೀಂದ್ರನಾಥ ಶಿ. ಯಡಹಳ್ಳಿ, ಬೀಳಗಿ

*ಮೀನಿನ ಹೆಜ್ಜೆ ಗೂ, ಹೆಣ್ಣಿನ ಹೆಜ್ಜೆ ಗೂ ಇರುವ ವ್ಯತ್ಯಾಸವೇನು?*



ಮೀನು ಹೆಜ್ಜೆ ಇಡಲು ಎಂದೂ ಹೈ ಹೀಲ್ಡ್ ಚಪ್ಪಲಿ ಕೇಳಿಲ್ಲ!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

*ಹೆಣ್ಣು ಒಮ್ಮೆ ಗುಡುಗಿದರೆ ಬಾಳು ಅಲ್ಲೋಲಕಲ್ಲೋಲವಂತೆ; ಗಂಡು ಗುಡುಗಿದರೆ?*

ಹೆಣ್ಣು ನಗೆಮಿಂಚು ಬೀರಿದರೆ ಗುಡುಗು ಮಾಯ!

ನರಸಿಂಹ ಎಂ. ಪೈ, ಹೊನ್ನಾವರ

*ಮದುವೆಗೆ ಮೊದಲು ಕೋಟ್ಯಧಿಪತಿ ಆಗಿದ್ದವನು ಬಳಿಕ ಲಕ್ಷಾಧಿಪತಿ ; ಏಕೆ?*

ಅಮ್ಮಾವ್ರ ಕೈಗುಣ, call ಗುಣ, mall ಗುಣ!

ಕಂಡಕ್ಟರ್ ರಾಜು, ಗುಬ್ಬಿ

*ತಡೆದ ಮಳೆ ಜಡಿದು ಬರುತ್ತದೆ. ತಡೆದ ಪ್ರೀತಿ...?*

ಸೀರಿಯಲ್ಲಾಗಿ ಹರಿದುಬರುತ್ತದೆ!

ರಾಜು ಎಸ್. ಗಾಲಿ, ಅಥಣಿ

*ನ್ಯಾಯ ಎಲ್ಲಿದೆ?*




ನ್ಯಾಯಬೆಲೆ ಅಂಗಡಿಯ ಬೋರ್ಡ್‌ನಲ್ಲಿ!

ಕೊಕ್ಕಡ ವೆಂಕಟ್ರಮಣಭಟ್, ಮಂಡ್ಯ

*ಕನ್ನಡದವ್ರು ಎಷ್ಟು ಜನ ಜ್ಞಾನಪೀಠ ಪಡ್ಕೊಂಡವ್ರೆ, ಎಷ್ಟು ಸಾಹಿತಿಗಳು ಪುರಸ್ಕೃತರಾಗಿದ್ದಾರೆ?*

ಎಚ್ಗೆ ಬಾರದವು ಐದು, ಕಂ ಬಾರದ್ದು ಒಂದು, ತೂಕ್ವೇ ಇಲ್ಲದ್ದು ಎಲ್ಲು ಅಂತು ನಮ್ಮನೆ ಪಾಪು!

ಪಿ.ಜೆ.ರಾಘವೇಂದ್ರ, ಮೈಸೂರು

*ಗೃಹಪ್ರವೇಶಕ್ಕೂ ಮುನ್ನ ಕಾರಾಗೃಹ ಪ್ರವೇಶವಾಯಿತಲ್ಲಾ...?*

ಒಳ್ಳೇ ಕೆಲಸ ಮಾಡಯ್ಯಾಂದ್ರೆ ಕೊಳ್ಳೆ ಕೆಲಸ ಮಾಡಿದ್ನಂತಲ್ಲಾ!

ಅರಕೆರೆ ಪಿ.ಸುರೇಶ್, ಭದ್ರಾವತಿ

*ದೊಡ್ಡತನಕ್ಕೂ, ಸಣ್ಣತನಕ್ಕೂ ಇರುವ ವ್ಯತ್ಯಾಸವೇನು?*

ದಾನ ಮಾಡುವುದು ದೊಡ್ಡತನ, ದಾನಕ್ಕೂ ರಸೀತಿ ಕೇಳಿ ಪಡೆಯುವುದು ಸಣ್ಣತನ!

ಪಿ.ಎನ್. ಶ್ರೀವತ್ಸ, ಬೆಂಗಳೂರು

*ನೆಚ್ಚಿನ ಸುಧಾ ಹೀಗೇ ಮುಂದುವರೆಯುತ್ತಾ ಹೋದರೆ ಎಲ್ಲಿಗೆ ತಲುಪಬಹುದು...?*

ಸಕಲ ಕನ್ನಡಿಗರ ಮನೆ, ಮನಕ್ಕೆ!

ಶ್ವೇತಾಲಕ್ಷ್ಮಿ ಅಮ್ಮೆ, ಬೆಂಗಳೂರು

*ಸಂಕಟ ಬಂದಾಗ ವೆಂಕಟರಮಣ ಎನ್ನುತ್ತಾರಲ್ಲಾ, ಈ ಮಾತು ಯಾರಿಗೆ ಹೆಚ್ಚು ಅನ್ವಯವಾಗುತ್ತದೆ?*

ವೆಂಕಟರಮಣ ಎಂಬ ಸಿರಿವಂತನ ಅಳಿಯನಿಗೆ!

ಎಚ್. ಆನಂದಕುಮಾರ್, ಚಿತ್ರದುರ್ಗ

*ಸ್ನೇಹದಲ್ಲಿ ಸೆಳೆತವಿದೆ, ದ್ವೇಷದಲ್ಲಿ ದಳ್ಳುರಿಯಿದೆ. ಪ್ರೀತಿಯಲ್ಲಿ...?*

ಜಾತಿ ಮೀರಿದ ನೀತಿ ಇದೆ, ರೀತಿ ಇದೆ.

ಎನ್. ವಸಂತಾ, ಕತ್ತರಗುಪ್ಪ

*ಲೆಗ್ ಅಂಪೈರ್ ಕೈ ಎತ್ತಿ ತೀರ್ಪು ನೀಡುತ್ತಾನಲ್ಲಾ, ಹೆಸರಿಗೆ ಅಪವಾದವಲ್ಲವೇ ಅಣ್ಣಯ್ಯಾ...?*

ಅವನು ಕೈ ಎತ್ತಿದರೂ ಬ್ಯಾಟ್ಸ್‌ಮನ್ ಕಾಲೆತ್ತಿಕೊಳ್ಳುವುದರಿಂದ ಅಪವಾದವಿಲ್ಲ ತಂಗಿ.

ಪಿ.ಜೆ. ರಾಘವೇಂದ್ರ, ಮೈಸೂರು

*ರಾಮ್‌ರಾಜ್ಯ ನಿರ್ಮಾಣಕ್ಕೆ ನಿಮ್ಮದೇನಾದರೂ ತಕರಾರಿದೆಯೇ ರಾಮ್?*

ಪರಶುರಾಮ್‌ನಂತೆ ತಲೆ ಕತ್ತರಿಸುವ, ಬಲರಾಮ್‌ನಂತೆ ಮದ್ಯ ಸೇವಿಸುವ ಡಬಲ್ ರಾಮ್ ರಾಜ್ಯ ಈಗಲೇ ಇದೆಯಲ್ಲಾ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ಈ ಯುಗದಲ್ಲಿಯೂ ಗಂಡ ಹೆಂಡತಿಯನ್ನು ಹೊಡೆಯುವುದು ಸಾಮಾನ್ಯ ಎನ್ನುತ್ತಾರಲ್ಲಾ...?*

ಸರಿಯೇ! ಗಂಡ ಎಂದರೆ ಕುತ್ತು, ಆಪತ್ತು, ಅಪಾಯ ಎಂದೇ ಅರ್ಥ!

## ಬಹುಮಾನಿತ ಪ್ರಶ್ನೆ

ಎಸ್. ನರೇಂದ್ರ ನಾಯಕ್, ಗಂಗೊಳ್ಳಿ

*ಹಣ ಕೊಟ್ಟರೂ ಸಿಗದ ವಸ್ತು ಯಾವುದು ಸಾರ್?*

ನನ್ನ ಮಗ ಎಂದನೊಬ್ಬ ಗ್ರೀನ್‌ಕಾರ್ಡ್ ಹೋಲ್ಡರ್‌ನ ವೃದ್ಧ ತಂದೆ.

ಕುಮಾರ ಚಲವಾದಿ, ಬೆಂಗಳೂರು

*ತೂಗುದೀಪ ಶ್ರೀನಿವಾಸರವರು ಮಾಡಿದ ದುಷ್ಟ ಪಾತ್ರಗಳು ದರ್ಶನ್ ಮೇಲೆ ಯಾಕೆ ಪ್ರಭಾವ ಬೀರಬೇಕು?*

ತೀರ್ಥ ಹಾಕಿ ತಿಕ್ಕಲು ತಿಕ್ಕಲಾಗಿ ಆಡಿದ್ದಕ್ಕೆ ತೀರ್ಥರೂಪ ಕಾರಣರಲ್ಲ... ಅದು ದರ್ಶನ್‌ನ ದುರ್ದರ್ಶನವಷ್ಟೆ!

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು

*ಏನು? ನಮ್ಮ ಪಾಪವನ್ನು ತೊಳೆಯಲು ಗಂಗಾನದಿಯ ನೀರೇ ಬೇಕೆ?*

ಹಾಗೇನಿಲ್ಲ, ಕಡೆಗಾಲಕ್ಕೊಂದು ಥಾಲಿ ಇದ್ದರೆ ಸಾಕೇ ಸಾಕು!

ವಿದ್ಯಾನಾಗ್, ಬೆಂಗಳೂರು

*ಅರಸ ಕಳ್ಳನಾಗುವುದಕ್ಕೂ, ಕಳ್ಳ ಅರಸನಾಗುವುದಕ್ಕೂ ಏನು ವ್ಯತ್ಯಾಸ?*



ಏನೇನೂ ಇಲ್ಲ; ಸಿಕ್ಕಿಬಿದ್ದರೆ ಕಳ್ಳ, ಇಲ್ಲವಾದರೆ ಅರಸ!

ಎಂ.ಬಿ. ಖೋದಾನಪುರ, ಸವದತ್ತಿ

*ಮಹಿಷಾಸುರನಂತಹ ಮಹಾ ಬಲಶಾಲಿ ಪುತ್ರನನ್ನು ಪಡೆಯಲು ಏನು ಮಾಡಬೇಕು?*

ವೃಷಭಾವತಿ ನದಿಯಲ್ಲಿ ಮಿಂದು, ವೃಷಭ ಲಗ್ನದಲ್ಲಿ ಮಹಿಷಿಯಂತಹವಳನ್ನು ಲಗ್ನವಾಗಬೇಕು!

ಪ್ರಹ್ಲಾದರಾಜು ಬುರ್ಲಿ, ದಾವಣಗೆರೆ

*ಆತ್ಮಕ್ಕೆ ಸಾವಿಲ್ಲ ಎಂದಾದ ಮೇಲೆ ಆತ್ಮಹತ್ಯೆ ಹೇಗಾಗುತ್ತೆ?*

ಎಂಗತನ, ಎಂಗಿಬೀಳುವಿಕೆ, ಎಕ್ಕಡಿಯಾಟ, ಎಕ್ಕರತನ, ಎಕ್ಕಸೊಕ್ಕು, ಎಚ್ಚರಗೇಡು, ಎಡಕು, ಎಡರು, ಎಡಬಿಡಂಗಿತನ ಮತ್ತು ಎಡವಟ್ಟು ಎಂಬ ಹತ್ತು ಎ ಗಳನ್ನು ಆತ್ಮಕ್ಕೆ ತಂದುಕೊಳ್ಳುವುದೇ ಆತ್ಮಹತ್ಯೆ!

■ ರಾಮ್